ಎಸ್.ಸಿ.ಸಂಖ್ಯೆಃ 497/2021
ಪ್ರಾ.ಸಾ-1

## ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್ -1) ರವರ ನ್ಯಾಯಾಂಗಣದಲ್ಲಿ

## ಎಸ್.ಸಿ. ಸಂಖ್ಯೆಃ 497/2021

ಚಾ.ಸಾ- 3 ಪ್ರಾ.ಸಾ- 1

ದಿಃ 14.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಬಿ.ಜಿ.ಕೃಷ್ಣ |
| ತಂದೆ ಹೆಸರು | ಗೋವಿಂದ ನಾಯಕ್ |
| ವಯಸ್ಸು | 59 ವರ್ಷ |
| ವೃತ್ತಿ | ಖಾಸಗಿ ಉದ್ಯೋಗ |
| ವಿಳಾಸ | ಬಸವೇಶ್ವರ ಬಡಾವಣೆ, ಬೆಂಗಳೂರು |

### ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನನಗೆ ಹರೀಶ್ ಅಲಿಯಾಸ್ ತುರೆ ಎನ್ನುವವರು ಗೊತ್ತಿಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳನ್ನು ಈ ಹಿಂದೆ ನೋಡಿರಲಿಲ್ಲ. ಆರೋಪಿಗಳು ಹರೀಶ್ ಅಲಿಯಾಸ್ ತುರೆ ಎನ್ನುವವರ ಮೇಲೆ ಹಲ್ಲೆ ಮಾಡಿರುವುದನ್ನು ನಾನು ನೋಡಿಲ್ಲ. ನಾನು ಆ ವಿಚಾರವಾಗಿ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

ಈ ಹಂತದಲ್ಲಿ ಮಾನ್ಯ ಮುಖ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯ ಹೇಳಿಕೆ ಹಾಗು ಕಡತದಲ್ಲಿನ ದಾಖಲೆಗಳನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.

ಪಾಟಿಸವಾಲುಃ ಮಾನ್ಯ ಅಭಿಯೋಜಕರಿಂದಃ

2. ದಿಃ 14.1.2021 ರಂದು ರಾತ್ರಿ 10.30 ರ ವೇಳೆಗೆ ನಾನು ನನ್ನ ಮನೆಯಲ್ಲಿ ಮಲಗಿದ್ದಾಗ ನನ್ನ ಮನೆಯ ಪಕ್ಕದಲ್ಲಿ ಯಾರೋ ಜೋರಾಗಿ ಕೂಗಾಡುವ ಶಬ್ದ ಕೇಳಿಸಿತ್ತು ಎಂದರೆ ಸರಿಯಲ್ಲ. ಅದರಂತೆ ನಾನು ಮತ್ತು ನನ್ನ ಮನೆಯವರು ಮನೆಯಿಂದ ಹೊರಬಂದು ನೋಡಿದಾಗ ನಮ್ಮ ಮನೆಯ ಪಕ್ಕದ ಖಾಲಿ ಸೈಟ್ ನಂಃ 2 ರಲ್ಲಿ 5 ಜನ ಅಪರಿಚಿತರು ಗುಂಪುಗೂಡಿ ಒಬ್ಬ ಅಪರಿಚಿತ ವ್ಯಕ್ತಿಯನ್ನು ಕೆಳಗೆ ಬೀಳಿಸಿಕೊಂಡು ಮಾರಕಾಯುಧಗಳಿಂದ ಹಲ್ಲೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆಗ ನಾನು ನಮ್ಮ ಲೇಔಟ್ ನ ನಂದೀಶಪ್ಪನವರಿಗೆ ಫೋನ್ ಮಾಡಿ ಆ ವಿಚಾರವನ್ನು ತಿಳಿಸಿದ್ದೆ ಹಾಗು ಅದರಂತೆ ನಂದೀಶಪ್ಪ ಮತ್ತು ಮಹೇಶ್ ರವರು ಅಲ್ಲಿಗೆ ಬಂದಿದ್ದರು ಎಂದರೆ ಸರಿಯಲ್ಲ. ಆಗ ವ್ಯಕ್ತಿಯ ಮೇಲೆ ಹಲ್ಲೆ ಮಾಡುತ್ತಿದ್ದವರು ಸ್ಥಳದಿಂದ ಓಡಿಹೋಗಿದ್ದರು ಎಂದರೆ ಸರಿಯಲ್ಲ. ನಂತರ ನಾವು ಹಲ್ಲೆಗೊಳಗಾಗಿ ಬಿದ್ದಿದ್ದ ವ್ಯಕ್ತಿಯನ್ನು ನೋಡಿ 100 ಸಂಖ್ಯೆಗೆ ಕರೆ ಮಾಡಿದ್ದ ಮೇರೆಗೆ ಪೋಲೀಸರು ಸ್ಥಳಕ್ಕೆ ಬಂದು ಆಂಬ್ಯುಲೆನ್ಸ್ ತರಿಸಿ ಗಾಯಾಳುವನ್ನು ಆಸ್ಪತ್ರೆಗೆ ಕಳುಹಿಸಿದ್ದರು ಎಂದರೆ ಸರಿಯಲ್ಲ.

3. ನಂತರ ದಿಃ 20.1.2021 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿ ಫೋಟೋವನ್ನು ತೋರಿಸಿದ್ದ ಮೇರೆಗೆ ಆ ವ್ಯಕ್ತಿಯನ್ನು ಹರೀಶ್ ಅಲಿಯಾಸ್ ತುರೆ ಎಂದು ಗುರುತಿಸಿದ್ದೆ ಎಂದರೆ ಸರಿಯಲ್ಲ. ಹಾಗೆಯೇ ಆ ವೇಳೆಗೆ ಪೋಲೀಸರ ವಶದಲ್ಲಿದ್ದ 2 ಮತ್ತು 3 ನೇ ಆರೋಪಿಗಳನ್ನು ನೋಡಿ ಸದರಿ ವ್ಯಕ್ತಿಗಳು

ಹಲ್ಲೆಯಲ್ಲಿ ಭಾಗಿಯಾಗಿದ್ದ ಬಗ್ಗೆ ಗುರುತಿಸಿದ್ದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನ್ನ ಹೇಳಿಕೆಯಲ್ಲಿ "ದಿಃ 14.1.2021 ರಂದು ... ... ... ಗುರುತಿಸುತ್ತೇನೆ." ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಭಾಗದ ಹೇಳಿಕೆಯನ್ನು ನಿ.ಪಿ-1 ಎಂದು ಗುರುತಿಸಲಾಯಿತು.

4. ನಾನು ಸಂಬಂಧಿತ ಘಟನೆಯನ್ನು ನೋಡಿದ್ದರೂ ಮತ್ತು ಅದರಲ್ಲಿ ಭಾಗಿಯಾಗಿದ್ದ ಆರೋಪಿಗಳನ್ನು ನೋಡಿ ಗುರುತಿಸಿ ಆ ಬಗ್ಗೆ ನಿ.ಪಿ-1 ರಂತೆ ಹೇಳಿಕೆಯನ್ನು ನೀಡಿದ್ದರೂ ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಆರೋಪಿಗಳ ಪರ ವಕೀಲರು ತಮ್ಮ ಪರ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.